


ನಾರಾಯಣ ಹೆಲ್ತ್ ಸಿಟಿ ಅಧ್ಯಕ್ಷ ಡಾ.ದೇವಿ ಶೆಟ್ಟಿ, ಇನ್ಫೋಸಿಸ್ ಪ್ರತಿಷ್ಠಾನದ ಸುಧಾ ಮೂರ್ತಿ

## ತರಬೇತಿ ಕೇಂದ್ರ

ನಾರಾಯಣ ಹೆಲ್ತ್ ಸಿಟಿಯಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಸಹಯೋಗದಲ್ಲಿ 15 ಕೋಟಿ ರೂಪಾಯಿ ವೆಚ್ಚದಲ್ಲಿ ರೊಬಾಟಿಕ್ ಸರ್ಜರಿ ತರಬೇತಿ ಕೇಂದ್ರ ಆರಂಭವಾಗಲಿದೆ. ಪ್ರತಿಷ್ಠಾನವು ಇದಕ್ಕಾಗಿ 8 ಕೋಟಿ ರೂಪಾಯಿ ನೀಡಲಿದೆ. ಹೆಲ್ತ್ ಸಿಟಿಯಲ್ಲಿ 500ಕ್ಕೂ ಅಧಿಕ ತಜ್ಞ ವೈದ್ಯರಿದ್ದು, ಹಲವರು ಈಗಾಗಲೇ ವಿದೇಶಗಳಲ್ಲಿ ತರಬೇತಿ ಪಡೆದಿದ್ದಾರೆ.

ಸದ್ಯದಲ್ಲಿಯೇ ಈ ತರಬೇತಿ ಆರಂಭವಾಗಲಿದ್ದು, ಜೊತೆಜೊತೆಗೆ ರೊಬಾಟ್ ಶಸ್ತ್ರಚಿಕಿತ್ಸೆಯನ್ನೂ ಹೆಲ್ತ್ ಸಿಟಿಯಲ್ಲಿ ಆರಂಭಿಸಲಾಗುವುದು ಎನ್ನುತ್ತಾರೆ ಹೆಲ್ತ್ ಸಿಟಿ ಅಧ್ಯಕ್ಷ ಡಾ.ದೇವಿ ಶೆಟ್ಟಿ.

ನಡೆಸಲಾಗುತ್ತಿದೆ. ನುರಿತ ವೈದ್ಯರಿದ್ದು, ರೋಗಿಗಳ ಸಂಖ್ಯೆ, ಕಾಯಿಲೆಗಳ ಸ್ವರೂಪ ಹೆಚ್ಚಿರುವ ಈ ದೇಶದಲ್ಲಿ ರೊಬಾಟ್ ಶಸ್ತ್ರಚಿಕಿತ್ಸೆಗೆ ಉತ್ತೇಜನ ನೀಡಬೇಕಾಗಿದೆ. ಆದರೆ ಸದ್ಯ ಕೊಚ್ಚಿನ್‌ನಲ್ಲಿ ಮಾತ್ರ ರೊಬಾಟ್ ನಿಯಂತ್ರಿಸುವ ಬಗ್ಗೆ ವೈದ್ಯರಿಗೆ ತರಬೇತಿ ನೀಡುವ ಕೇಂದ್ರವಿದ್ದು, ಹೆಚ್ಚಿನವರು ವಿದೇಶಗಳಲ್ಲಿ ಪರಿಣತಿ ಪಡೆದು ಬಂದವರು. ಬೆಂಗಳೂರಿನ ನಾರಾಯಣ ಹೆಲ್ತ್ ಸಿಟಿಯಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಸಹಯೋಗದಲ್ಲಿ ಈ ತರಬೇತಿ ಕೇಂದ್ರ ಶೀಘ್ರವೇ ಆರಂಭವಾಗಲಿದೆ.

ಭಾರತದಲ್ಲಿ ಈ ಕ್ಷೇತ್ರದಲ್ಲಿನ ಹಿಂಜರಿಕೆಗೆ ಇನ್ನೊಂದು ಕಾರಣವೆಂದರೆ ಶಸ್ತ್ರಚಿಕಿತ್ಸೆಗೆ ತಗಲುವ ವೆಚ್ಚ. ದ ವಿಂಚಿ ರೊಬಾಟ್‌ನ ಎಸ್‌ಐ ಆವೃತ್ತಿ ಬೆಲೆ ಅಂದಾಜು 16 ಕೋಟಿ ರೂಪಾಯಿ (20 ಲಕ್ಷ ಡಾಲರ್ + ಆಮದು ಸುಂಕ). ಕೆಲವು ಉಪಕರಣಗಳನ್ನು ಪದೇ ಪದೇ ಬದಲಿಸಬೇಕಾಗುತ್ತದೆ. ಸದ್ಯಕ್ಕೆ ದ ವಿಂಚಿ ಕಂಪೆನಿಯ ರೊಬಾಟ್ ಮಾತ್ರ ಮಾರುಕಟ್ಟೆಯಲ್ಲಿದ್ದು, ಬೇರೆ ಬೇರೆ ಕಂಪೆನಿಗಳು ಮಾರುಕಟ್ಟೆ ಪ್ರವೇಶಿಸಿದರೆ ಬೆಲೆ ಕಡಿಮೆಯಾಗಬಹುದು.

‘25 ವರ್ಷಗಳ ಹಿಂದೆ ತೆರೆದ ಹೃದಯದ ಶಸ್ತ್ರಚಿಕಿತ್ಸೆಗೆ ಒಂದೂವರೆ ಲಕ್ಷ ರೂಪಾಯಿ ವೆಚ್ಚವಾಗುತ್ತಿತ್ತು. ಈಗ 90 ಸಾವಿರ ರೂಪಾಯಿಗೆ ಇಳಿದಿದೆ. ಹಾಗೆಯೇ ರೊಬಾಟ್ ಶಸ್ತ್ರಚಿಕಿತ್ಸೆಗೆ 1–3 ಲಕ್ಷ ರೂಪಾಯಿ ಆಗಬಹುದು. ಕ್ರಮೇಣ ಅದು ಕಡಿಮೆಯಾಗಬಹುದು. ಒಂದು ಶಸ್ತ್ರಚಿಕಿತ್ಸೆಗೆ ಬಳಸುವ ಉಪಕರಣಗಳ ಬೆಲೆಯೇ 70 ಸಾವಿರದಿಂದ ಒಂದು ಲಕ್ಷ ರೂಪಾಯಿ. ಇವುಗಳನ್ನು ಬದಲಿಸಬೇಕಾಗುತ್ತದೆ’ ಎನ್ನುತ್ತಾರೆ ಡಾ.ಶೆಟ್ಟಿ.

ಭಾರತದಲ್ಲಿ ಶೇ 80ರಷ್ಟು ಆರೋಗ್ಯಸೇವೆಯನ್ನು ಖಾಸಗಿ ಕ್ಷೇತ್ರ ನೀಡುತ್ತಿದೆ. ಬಡವರೇ ಅಧಿಕ ಸಂಖ್ಯೆಯಲ್ಲಿರುವ ಈ ದೇಶದಲ್ಲಿ ಸರ್ಕಾರಿ ಆಸ್ಪತ್ರೆಗಳು ಈ ತಂತ್ರಜ್ಞಾನವನ್ನು ಎಲ್ಲರಿಗೂ ತಲುಪಿಸುವುದೂ ಅನುಮಾನವೇ.

ಕೆಲವು ಹಾಲಿವುಡ್ ವೈಜ್ಞಾನಿಕ ಸಿನಿಮಾಗಳಲ್ಲಾದಂತೆ ಇಲ್ಲಿಯೂ ರೊಬಾಟ್ ಎರ್ರಾಬಿರ್ರಿ ವರ್ತಿಸಿ ರೋಗಿಯನ್ನೇ ಸಾಯಿಸಿದರೆ.. ಯಾರೋ ಕಿಡಿಗೇಡಿಗಳು ವೈರಸ್ ತಗುಲಿಸಿ ಅಥವಾ ಪ್ರೋಗ್ರಾಮನ್ನೇ ಬೇರೆ ರೀತಿ ಬರೆದುಬಿಟ್ಟರೆ... ಇತ್ಯಾದಿ ಆತಂಕಗಳನ್ನೂ ಕೆಲವರು ಹರಿಯಬಿಟ್ಟಿದ್ದಾರೆ.

ಸದ್ಯ ನಾವು ಒಂದು ರೀತಿಯ ರೋಮಾಂಚನಕಾರಿ ಯುಗದಲ್ಲಿದ್ದೇವೆ. ಹಿಂದೆ ವೈಜ್ಞಾನಿಕ ಕಾದಂಬರಿ, ಸಿನಿಮಾಗಳಲ್ಲಿ ಮಾತ್ರ ಚಿತ್ರಣಗೊಂಡಿದ್ದ ತಂತ್ರಜ್ಞಾನಗಳು ಈಗ ವಾಸ್ತವಕ್ಕೆ ಇಳಿದಿವೆ. ಕ್ಲೋನಿಂಗ್, ವಂಶವಾಹಿ, ನ್ಯಾನೊ ಮೊದಲಾದ ತಂತ್ರಜ್ಞಾನಗಳು ಬದುಕಿನಲ್ಲಿ ಬೆಸೆದುಕೊಂಡು ಸಹಜವಾಗಿ ಸ್ವೀಕರಿಸುವಂತಹ ಮನಃಸ್ಥಿತಿಗೆ ತಲುಪಿದ್ದೇವೆ. ಹಾಗೆಯೇ ಈ ರೊಬಾಟ್ ಶಸ್ತ್ರಚಿಕಿತ್ಸೆ ಕೂಡಾ.




# ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

**ಪಂಡಿತ. ಶ್ರೀ ಗಣೇಶ್ ಕುಮಾರ್** ಶ್ರೀ ಶ್ರೀ ಹನುಮಾನ್ ಆರಾಧಕರು



ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

**ಬೆಂಗಳೂರು ಖಾಯಂ ಮನೆ ವಿಳಾಸ** ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

**ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ**

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು **9880444450**